1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ,
ನಂಜನಗೂಡು

**ಸಿ.ಸಿ.ಸಂಃ505/2024**

ಪಿರ್ಯಾದಿ ಸರ್ಕಾರದ ಪರಃ ಬಿಳಿಗೆರೆ ಪೊಲೀಸರು

ವಿರುದ್ಧ

ಆರೋಪಿ ಃ

1 ಅರಸನಾಯಕ ಬಿನ್ ಲೇಟ್ ಮಹದೇವನಾಯಕ 59 ವರ್ಷ

2 ಹುಚ್ಚಮ್ಮ ಉ. ಲಕ್ಷ್ಮಮ್ಮ ಕೋಂ ಅರಸನಾಯಕ 41 ವರ್ಷ

3 ಪುಟ್ಟರಾಜು ಬಿನ್ ಅರಸನಾಯಕ 22 ವರ್ಷ

4 ಮಹದೇವಪ್ರಸಾದ್ ಬಿನ್ ಅರಸನಾಯಕ 25 ವರ್ಷ

ಎಲ್ಲರ ವಾಸಃ ಸುತ್ತೂರು ಗ್ರಾಮ, ನಂಜನಗೂಡು ತಾಲ್ಲೂಕು

**ದೋಷಾರೋಪಣೆ**

ಶ್ರೀಮತಿ.ಸರಿತ ಕುಮಾರಿ.ಎ.ಎಂ, ಬಿ.ಎ.,ಎಲ್.ಎಲ್.ಬಿ., 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನಂಜನಗೂಡು ಆದ ನಾನು ಆರೋಪಿತರಾದ ನಿಮ್ಮ ಮೇಲೆ ದೋಷಾರೋಪಿಸುವುದೇನೆಂದರೆ:-

ದಿನಾಂಕಃ 27.09.2023 ರಂದು ರಾತ್ರಿ 10.30 ಗಂಟೆ ಸಮಯದಲ್ಲಿ ಬಿಳಿಗೆರೆ ಪೊಲೀಸ್ ಠಾಣಾ ವ್ಯಾಪ್ತಿಗೆ ಸೇರಿದ ಸುತ್ತೂರು ಗ್ರಾಮದ ಚಾಸಾ.1 ರವರು ಮನೆಯ ಮುಂಭಾಗ ಇದ್ದಾಗ ಆರೋಪಿತರು ಅಪರಾಧವನ್ನು ಎಸಗುವ ಸಮಾನ ಉದ್ದೇಶದಿಂದ ಆಸ್ತಿಯ ವಿಚಾರವಾಗಿ ಹಳೇ ದ್ವೇಷವನ್ನಿಟ್ಟುಕೊಂಡು ಜಗಳ ತೆಗೆದು 1ನೇ ಆರೋಪಿತರಾದ ನೀವು ಏಕಾಏಕಿ ಚಾಸಾ.1 ರವರಿಗೆ ದೊಣ್ಣೆಯಿಂದ ಭುಜಕ್ಕೆ ಹೊಡೆದು ಸಾಮಾನ್ಯ ಸ್ವರೂಪದ ಗಾಯಪಡಿಸಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವು ಭಾರತ ದಂಡ ಸಂಹಿತೆಯ

ಕಲಂ.324 ಸಹವಾಚಕ 34 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಎರಡನೇಯದಾಗಿ ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಅಪರಾಧವನ್ನು ಎಸಗುವ ಸಮಾನ ಉದ್ದೇಶದಿಂದ, 2 ನೇ ಆರೋಪಿತರಾದ ನೀವು ಚಾಸಾ.2 ರವರ ಕಪಾಲಕ್ಕೆ ಕೈಯಿಂದ ಹೊಡೆದಿರುತ್ತೀರಿ ಮತ್ತು ಚಾಸಾ.3 ರವರಿಗೆ 3 ಮತ್ತು 4 ನೇ ಆರೋಪಿತರಾದ ನೀವು ಕಾಲಿನಿಂದ ತುಳಿದು ಕೈಗಳಿಂದ ಹೊಡೆದು ಸಾಮಾನ್ಯ ಸ್ವರೂಪದ ಗಾಯಪಡಿಸಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವು ಭಾರತ ದಂಡ ಸಂಹಿತೆಯ ಕಲಂ.323 ಸಹವಾಚಕ 34 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಕೊನೇಯದಾಗಿ ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಅಪರಾಧವನ್ನು ಎಸಗುವ ಸಮಾನ ಉದ್ದೇಶದಿಂದ, ಕೊಲೆ ಬೆದರಿಕೆ ಹಾಕಿ ಅಪರಾಧಿಕ ಭಯೋತ್ಪಾದನೆಯನ್ನು ಎಸಗಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ.506 ಸಹವಾಚಕ 34 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

(ಮೇಲ್ಕಂಡ ಆರೋಪವನ್ನು ಆರೋಪಿತರಿಗೆ ಓದಿ ಹೇಳಿ ಕೇಳಲಾಯಿತು. ಆರೋಪಿ ಕೊಟ್ಟ ಉತ್ತರವನ್ನು ಅವರು ಉತ್ತರಿಸಿದಂತೆಯೇ ಬರೆದುಕೊಂಡಿದ್ದು ಸಂಪೂರ್ಣ ಹಾಗೂ ಸರಿಯಾದ ಮಾಹಿತಿಯನ್ನು ಒಳಗೊಂಡಿದೆ ಎಂದು ದಿನಾಂಕ 17.03.2026 ರಂದು ತೆರೆದ ನ್ಯಾಯಾಲಯದಲ್ಲಿ ದೃಢೀಕರಿಸಿರುತ್ತೇನೆ.)

1 ನೇ ಹೆ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.
ನಂಜನಗೂಡು

1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ನಂಜನಗೂಡು

**ಸಿ.ಸಿ.ಸಂಃ505/2024**

ಪಿರ್ಯಾದಿ ಸರ್ಕಾರದ ಪರಃ ಬಿಳಿಗೆರೆ ಪೊಲೀಸರು

ವಿರುದ್ಧ

ಆರೋಪಿ ಃ 1 ಅರಸನಾಯಕ ಬಿನ್ ಲೇಟ್ ಮಹದೇವನಾಯಕ 59 ವರ್ಷ

2 ಹುಚ್ಚಮ್ಮ ಉ.ಲಕ್ಷ್ಮಮ್ಮ ಕೋಂ ಅರಸನಾಯಕ 41 ವರ್ಷ

3 ಪುಟ್ಟರಾಜು ಬಿನ್ ಅರಸನಾಯಕ 22 ವರ್ಷ

4 ಮಹದೇವಪ್ರಸಾದ್ ಬಿನ್ ಅರಸನಾಯಕ 25 ವರ್ಷ

ಎಲ್ಲರ ವಾಸಃ ಸುತ್ತೂರು ಗ್ರಾಮ, ನಂಜನಗೂಡು ತಾಲ್ಲೂಕು

ಃ ಆಪಾದನೆ ಃ

ಪ್ರಶ್ನೆಃ1- ಈ ಮೇಲೆ ಹೇಳಿದಂತೆ ನಿಮಗೆ ಓದಿ ಹೇಳಿ ವಿವರಿಸಿದ ಆಪಾದನೆಯನ್ನು ಅರ್ಥಮಾಡಿಕೊಂಡಿರುವಿರಾ?

1 ನೇ ಆರೋಪಿ ಉತ್ತರಃ

2 ನೇ ಆರೋಪಿ ಉತ್ತರಃ

3 ಆರೋಪಿ ಉತ್ತರಃ

4 ನೇ ಆರೋಪಿ ಉತ್ತರಃ

ಪ್ರಶ್ನೆಃ2- ಸದರಿ ಆಪಾದನೆಗಳನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೋ?

1 ನೇ ಆರೋಪಿ ಉತ್ತರಃ

2 ನೇ ಆರೋಪಿ ಉತ್ತರಃ

3 ಆರೋಪಿ ಉತ್ತರಃ

**4 ನೇ ಆರೋಪಿ ಉತ್ತರಃ**

ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ನನ್ನ ಸಮಕ್ಷಮ ಓದಿ ಹೇಳಿ ಆರೋಪಿತನ ಹೇಳಿಕೆಯನ್ನು ಪಡೆದುಕೊಂಡು ಸತ್ಯವಾಗಿದೆ ಎಂದು ದೃಢೀಕರಿಸಲಾಗಿದೆ.

1 ನೇ ಹೆ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.
**ನಂಜನಗೂಡು**